

ಒಂದು ಕಾಲದಲ್ಲಿ ಒಂದು ಊರಿನಲ್ಲಿ ಒಂದು ಬ್ರಾಹ್ಮಣ ಕುಟುಂಬ ಇತ್ತು. ಅವರಿಗೆ ಗದ್ದೆ ತೋಟ, ದೊಡ್ಡ ಮನೆ ಇತ್ತು. ಆ ಕುಟುಂಬ ಚಿಂತೆ ಇಲ್ಲದೇ ಸುಖವಾಗಿತ್ತು.

ಒಂದು ದಿನ ಒಬ್ಬ ಕಳ್ಳ ಇವರ ಮನೆಯ ಮುಂದೆ ಹೋಗುತ್ತಿದ್ದ. ಈ ಮನೆಯವರಿಗೆ ಗದ್ದೆ, ತೋಟ ಇತ್ಯಾದಿಗಳು ಇವೆ. ಇವರು ಶ್ರೀಮಂತರೇ ಇರಬೇಕು. ಈ ದಿನ ರಾತ್ರಿ ಈ ಮನೆ ಹಿಂದಿನ ಗೋಡೆಗೆ ಕನ್ನ ಹಾಕಿ ದುಡ್ಡು, ಒಡವೆಗಳನ್ನು ಕಳ್ಳತನ ಮಾಡಬೇಕೆಂದು ಯೋಚನೆ ಮಾಡಿದ.

ಕಳ್ಳ ಗೋಡೆ ತೋಡುವ ಕಬ್ಬಿಣದ ಸಾಮಗ್ರಿ ತೆಗೆದುಕೊಂಡು ಬ್ರಾಹ್ಮಣರ ಮನೆಯ ಗೋಡೆ ತೋಡಲು ಪ್ರಾರಂಭಿಸಿದ. ಆ ಶಬ್ದಕ್ಕೆ ಅಲ್ಲಿ ಹತ್ತಿರ ಮಲಗಿದ್ದ ಬ್ರಾಹ್ಮಣನಿಗೆ ಎಚ್ಚರವಾಯಿತು. ಅವನು ಎದ್ದು ಎಲ್ಲಿಂದ ಈ ಶಬ್ದ ಬರುತ್ತಿದೆ ಎಂದು ಗಮನಿಸುತ್ತಾ ಕುಳಿತುಕೊಂಡನು.

ಕಳ್ಳ ಗೋಡೆ ಒಡೆದು ಕನ್ನಾ ಮಾಡಿದ. ಆ ಕನ್ನದ ಮೂಲಕ ಮನೆ ಒಳಗೆ ಬರಲು ಸಿದ್ಧನಾದ. ಬ್ರಾಹ್ಮಣ ಕಳ್ಳನನ್ನ ನೋಡಿದ. ಮಧ್ಯರಾತ್ರಿ ಆಗಿತ್ತು. ಏನು ಮಾಡಲೂ ತೋಚಲಿಲ್ಲ. ಆಗ ಬ್ರಾಹ್ಮಣ ಕಳ್ಳನಿಗೆ ಕೇಳುವಂತೆ ಗಟ್ಟಿಯಾಗಿ ಹಾಡಲು ಶುರುಮಾಡಿದ.

ಹೆಗ್ಗಣಪ್ಪ ಹೆಗ್ಗಣಪ್ಪ ತೋಡತಂತೆ
ನೀ ತೋಡತಂತೆ ನಾ ತೋಡತಂತೆ
ಅದಾರೋ ತೋಡಿದವರು?

ಈ ಪದ ಕಳ್ಳನಿಗೆ ಕೇಳಿಸಿತು. ಕನ್ನದಿಂದ ಇಣುಕಿ ನೋಡಿದ. ಬ್ರಾಹ್ಮಣನನ್ನು ನೋಡಿದ. ಮನೆಯವರು ಎದ್ದಿದ್ದಾರೆಂದು ತಿಳಿದು ಅಲ್ಲೇ ಸುಮ್ಮನೇ ಕುಳಿತುಕೊಂಡ.

ಆಗ ಬ್ರಾಹ್ಮಣ ಮೊದಲಿನಂತೆ ಗಟ್ಟಿಯಾಗಿ ಹಾಡಿದ.

ಹೆಗ್ಗಣಪ್ಪ ಹೆಗ್ಗಣಪ್ಪ ಕೂತಂತೆ
ನೀ ಕೂತಂತೇ ನಾ ಕುಂತಂತೆ
ಅದಾರೋ ಕುಂತವರು?

ಆಗ ಕಳ್ಳ ಎದ್ದು ನಿಂತುಕೊಂಡ.

ಪುನಃ ಕಳ್ಳನ ಕಡೆ ನೋಡುತ್ತಾ ಈ ರೀತಿ ಬ್ರಾಹ್ಮಣ ಗಟ್ಟಿಯಾಗಿ ಹಾಡಿದ.

ಹೆಗ್ಗಣಪ್ಪ ಹೆಗ್ಗಣಪ್ಪ ನಿಂತಂತೆ
ನೀ ನಿಂತಂತೆ ನಾ ನಿಂತಂತೆ
ಅದಾರೋ ನಿಂತವರು?

ಆಗ ಕಳ್ಳನಿಗೆ ಹೆದರಿಕೆ ಆಯಿತು. ತನ್ನ ಕಬ್ಬಿಣದ ಸಾಮಾನು ಅಲ್ಲೇ ಬಿಟ್ಟು ಓಡಲು ಶುರುಮಾಡಿದ

ಪುನಃ ಬ್ರಾಹ್ಮಣ ಈ ರೀತಿ ಹಾಡಿದ.

ಹೆಗ್ಗಣಪ್ಪ ಹೆಗ್ಗಣಪ್ಪ ಓಡಿತಂತೆ
ನೀ ಓಡಿತಂತೆ ನಾ ಓಡಿತಂತೆ
ಅದಾರೋ ಓಡಿದವರು?

ಕಳ್ಳ ಪುನಃ ಮನೆಕಡೆ ಬರಲೇ ಇಲ್ಲವಂತೆ.

**-ಬಿ.ರಾಮಮೂರ್ತಿ, ಮೈಸೂರು**



ತಾತನು ಮಾಡಿದ ಸುಂದರ ತೋಟ
ನೋಡಿರಿ ಅದರ ಅಂದದ ನೋಟ
ಬನ್ನಿರಿ ನನ್ನ ಗೆಳೆಯರ ಕೂಟ
ಆಡುವ ಇಲ್ಲಿ ಬಗೆ ಬಗೆ ಆಟ!

ಒಂದೆಡೆ ಕಾಣುವ ಭತ್ತದ ಪೈರು
ತಾತನು ಉಣಿಸುವ ಕಾಲುವೆ ನೀರು
ಹೀರಿದೆ ಸಸಿಗಳ ಒಳಗಿನ ಬೇರು
ತುಂಬಿದೆ ತೆನೆಗಳು ಇಲ್ಲಿ ಸಹಸ್ರಾರು!

ನೋಡಿರಿ ಆ ಕಡೆ ತೆಂಗು ಕಂಗು
ಕಾಣಿರಿ ಬಿಸಿಲಲಿ ಅವುಗಳ ರಂಗು
ಕೇಳಿರಿ ಹಕ್ಕಿಯ ಚಿಲಿಪಿಲಿ ಕೂಗು
ಮಾಡದೇ ಅದು ಯಾವುದೇ ಸೋಗು!

ಈ ಕಡೆ ಕಾಣುವ ಬದನೆಕಾಯಿ
ಬಳ್ಳಿಯಲಿ ಬಿಟ್ಟ ಕುಂಬಳಕಾಯಿ
ಚಪ್ಪರದಿ ತೂಗುವ ಹೀರೇಕಾಯಿ
ಧನ್ಯಳು ಅಲ್ಲವೇ ಈ ಭೂಮಿತಾಯಿ

**-ಜಯಲಕ್ಷ್ಮಿ ವಿಟ್ಲ**